ಎಸ್.ಪಿ. ಸಾಹೇಬರಿಗೆ ಸ್ಪಷ್ಟನೆ ಬೇಕಿತ್ತು.

'ಅಮ್ಮು ಅವರ ಹತ್ತಿರ ಸಮಾಧಾನವಾಗಿ ಮಾತಾಡಿ ಎಲ್ಲಾ ಸರಿ ಮಾಡ್ಕೊಳ್ಳಿ ಅಂತ ಸಲಹೆ ಕೊಟ್ಟು, ಇವರ ಫ್ಯಾಕ್ಟರಿ ಫೋರ್‌ಮನ್ ಜೊತೆಗೆ ಹಿತೈಷಿಯೂ ಆದ ಮುರುಗನ್ ಹೇಳಿ ಕಳಿಸಿದ್ದರು. ಹಾಗೆ ಮಾತು ಸಂವಾದಗಳಿಂದ ಬಗೆಹರಿಸಿಕೊಳ್ಳಲು ಬಂದವನು ಮತ್ತೆ ಜಗಳಕ್ಕೆ ಬಿದ್ದು ವಿಕೋಪಕ್ಕೆ ಹೋಗಿ ಈ ಅವಘಡ ನಡೆದಿರಬಹುದು'.

'ಸರಿ, ಮುಂದುವರಿಸಿ...'

'ಅಮ್ಮು ಕೊಲೆಯಾಗುವ ಸ್ವಲ್ಪ ಸಮಯದ ಹಿಂದಷ್ಟೇ ಇವರಿಬ್ಬರ ನಡುವಿನ ಜೋರಾದ ಕೂಗಾಟ ಕಿತ್ತಾಟಕ್ಕೆ ಪ್ರತ್ಯಕ್ಷ ಸಾಕ್ಷಿಯಿದ್ದಾರೆ. ಕೊಲೆಗೆ ಬಳಸಿದ ಆಯುಧ ಇವನ ಫ್ಯಾಕ್ಟರಿಯದೇ. ಕೊಲೆ ಆಯುಧ ಸಿಕ್ಕಿರೋದು ಇವನ ಕಾರಲ್ಲೇ. ಕೊಲೆ ನಡೆದ ನಂತರ ತನ್ನ ಫೋನ್ ಆಫ್ ಮಾಡಿಕೊಂಡು ಎಲ್ಲೋ ಹೋಗಿ ಅಡಗಿ ಕುಳಿತುಕೊಂಡಿದ್ದು ಇವನೇ. ಈತ ಅತ್ಯಂತ ಪ್ರಮುಖ ಆರೋಪಿ ಸರ್'.

ಜಯಂತ್ ನಿರ್ಲಿಪ್ತನಾಗಿ ನಿಂತಿದ್ದ.

'ಐ ಥಿಂಕ್ ದಿಸ್ ಈಸ್ ಅವರ್ ಮ್ಯಾನ್ ಮಾಯಣ್ಣ... ನೀವು ಮುಂದುವರಿಯಬಹುದು...'

'ಯೆಸ್ ಸಾರ್... ಕಾಟಯ್ಯ ಈತನನ್ನ ಕರ್ಕೊಂಡೋಗಿ ಒಳಗೆ... ಹೊರಗೆ ಕಾರಿನಲ್ಲಿ ಜಾಹ್ನವಿಯವರಿದ್ದಾರೆ, ಅವರನ್ನ ಕರೀರಿ'.

ಒಂದೈದು ನಿಮಿಷಗಳ ನಂತರ ಪ್ರವೇಶಿಸಿದ ಜಾಹ್ನವಿಗೆ ಕೂರಲು ಕುರ್ಚಿ ತೋರಿಸಲಾಯಿತು. ಮಾಯಣ್ಣನಿಗೆ ಇಡೀ ಕಾರ್ಯಕ್ರಮದ ಮುಜುಗರದ ಭಾಗವಾದ ಇದನ್ನು ಹೇಗೆ ನಿಭಾಯಿಸಲಿ ಎಂದು ಒಳಗೊಳಗೇ ಪೇಚಾಟ ಶುರುವಾಗಿತ್ತು. ವೃತ್ತಿಪರ ವಿಷಯಗಳು ವೈಯಕ್ತಿಕವಾದಾಗ ಅದು ಹೇಗೆ ಹೆಗಲೇರಿದ ಮಂಗವಾಗುತ್ತೆ ಎಂದರಿವಾಗಿತ್ತು.

'ಸರ್, ಇವರು ಟೀವಿ ಸೀರಿಯಲ್ ನಟಿ ಜಾಹ್ನವಿ ಅಂತ. ಮೊದಲಿಗೆ ಅಮ್ಮು ಅವರಿಂದ ತನಗೆ ವೈಯಕ್ತಿಕವಾಗಿ ಮತ್ತು ವೃತ್ತಿ ಜೀವನದಲ್ಲಿ ಅನ್ಯಾಯವಾಗಿದೆ ಅಂತ ತಿಳಿದಿದ್ದರು. ಎರಡರಲ್ಲೂ ತಾನಿದ್ದ ಸ್ಥಾನವನ್ನು ಅಮ್ಮು ತನ್ನಿಂದ ಕಸಿದುಕೊಂಡಿದ್ದಾರೆ ಅನ್ನೋ ಭಾವದಲ್ಲಿದ್ದೆ ಅಂತ ಅವರೇ ಒಪ್ಪಿಕೊಂಡಿದ್ದಾರೆ.

ಹಾಗಾಗಿ ಅವರ ಮೇಲೆ ಇವರಿಗೆ ಕೋಪ, ಅಸಹನೆ ಇತ್ತು. ಕಾಲಕ್ರಮೇಣ, ಡೈರೆಕ್ಟರ್ ದಿನೇಶ್ ಇವರನ್ನು ತನ್ನ ಧಾರಾವಾಹಿ ಮತ್ತು ತನ್ನ ವೈಯಕ್ತಿಕ ಜೀವನದಿಂದ, ಈಕೆಯನ್ನು ಆಚೆ ದೂಡುವ ಸಲುವಾಗಿ ರಚಿಸಿದ ವ್ಯೂಹದಲ್ಲಿ, ಅಮ್ಮು ಮುಗ್ಧ ಪಾತ್ರಧಾರಿಯಷ್ಟೇ ಎಂದರಿತು ಅಮ್ಮು ಬಗ್ಗೆ ತನಗಿದ್ದ ಕಹಿಯೆಲ್ಲಾ ಕರಗಿಹೋಯಿತು ಎನ್ನುತ್ತಾರೆ. ಬಹುಶಃ ಇದೆಲ್ಲದರ ಕುರಿತು ಅವರೇ ಏನಾದರೂ ಹೇಳಬಹುದೇನೊ ಅಂತ ಕರೆಸಿದ್ದೀವಿ ಸರ್'.

ಈಗ ನಿಮ್ಮ ಸರದಿ ಎನ್ನುವಂತೆ ಎಸ್‌ಪಿ ಸಾಹೇಬರು ಜಾಹ್ನವಿ ಕಡೆ ತಿರುಗಿದರು.

'ಸರ್, ದಿನೇಶ್ ಈ ಫೀಲ್ಡ್ ಎಂಟರ್ ಆದಾಗಿನಿಂದಲೂ ನನಗೆ ಗೊತ್ತು. ಯಾವುದೇ ಸಂಬಂಧ ಇರಲಿ ಅದನ್ನು ಲಾಭ ನಷ್ಟಗಳ ತಕ್ಕಡಿಯಲ್ಲಿ ತೂಗಿಯೇ ಮುಂದುವರಿಸುವುದು. ಮೊದಲಿನಿಂದಲೂ ಅಮ್ಮು ಅವರನ್ನ ಒಂದು ಅದ್ಭುತವಾದ ಅವಕಾಶ ಎಂದೇ ಕಂಡು, ಅದಕ್ಕೆ ತಕ್ಕಂತೆ ಮಿಕ್ಕೆಲ್ಲವನ್ನು ಹೊಂದಿಸಿಕೊಂಡವನು. ಯಾವಾಗ ಅವನ ಯೋಜನೆಯು ಹಳಿ ತಪ್ಪಿ ತನ್ನ ಅಸ್ತಿತ್ವ, ಸ್ಥಾನಮಾನಗಳಿಗೇ ಎರವಾಗುವಂತಾಯಿತೋ ಆಗ ಹತಾಶೆಯಿಂದ ಈ ಪಾಪಕೃತ್ಯಕ್ಕೆ ಕೈ ಹಾಕಿರಬಹುದು. ಇದನ್ನ ನಾನು ಎಸ್.ಐ. ಸಾಹೇಬರಿಗೆ ಒತ್ತಿ ಒತ್ತಿ ಹೇಳಿದ್ದೀನಿ. ಬಹುಶಃ ಎಸ್‌ಐ ಸಾರ್ ನನ್ನ ಮನೆಗೆ ಹೇಳಿಕೆ ಪಡೆಯಲು ಬಂದ ಆ ಸಮಯದಲ್ಲಿ ಅವರ ಮೇಲಿನ ಒತ್ತಡದಲ್ಲಿ ಈ ವಿಷಯವನ್ನು ಸರಿಯಾಗಿ ಕೇಳಿಸಿಕೊಂಡರೋ ಇಲ್ಲವೋ ಗೊತ್ತಿಲ್ಲ'.

ಮಾಯಣ್ಣ ತಲೆಬಗ್ಗಿಸಿ ನೆಲಕ್ಕೆ ಹಾಕಿದ್ದ ನಾರುಹಾಸಿನ ಹೆಣಿಗೆ ಗಮನಿಸುತ್ತಿದ್ದ.

'ಸರಿ, ನೀವು ಹೊರಡಬಹುದು ಮೇಡಮ್'.

ಜಾಹ್ನವಿ ಎದ್ದು ಹೋದ ಮೇಲೆ ಮಾಯಣ್ಣನ ಅನಗತ್ಯ ಅವಸರ, ಅನುಭವಿ ಅಧಿಕಾರಿಯ ಅವಗಾಹನೆಗೆ ಬಂದಿತ್ತೇನೊ?

'ಮಾಯಣ್ಣ, ಈಕೆಯನ್ನು ಇಲ್ಲಿಗೆ ನೀವು ಕರೆಸಿದ್ದು ಸಾಕ್ಷಿಯಾಗಿಯೋ ಇಲ್ಲ ಆರೋಪಿಯಾಗಿಯೋ?'

'ಸರ್, ಈಕೆ ಒಬ್ಬ ಆರೋಪಿಯೇ. ಈಕೆಗೂ ಕೊಲೆಯಾದ ಅಮ್ಮು ಬಗ್ಗೆ ದ್ವೇಷ ಸೇಡುಗಳ ಭಾವನೆಗಳಿದ್ದು, ಶೂಟಿಂಗ್ ಲೊಕೇಶನ್‌ನಲ್ಲಿ ಓಪನ್ನಾಗಿ ಜೀವ ಬೆದರಿಕೆ ಹಾಕಿದ್ದಾರೆ. ಅಲ್ಲದೆ ಮೊದಲು ಅದೇ ಯುನಿಟ್ಟಿನ ಇನ್ಯಾರಿಗೊ ಇನ್ಯಾವುದೊ ವಿಷಯಕ್ಕೆ, ತಮ್ಮ ರೌಡಿ ಕಸಿನ್ಸ್ ಮೂಲಕ ಸೀರಿಯಸ್ ಅಸಾಲ್ಟ್ ಮಾಡಿಸಿದ್ದಾರೆ ಅಂತ ಒಂದು ಹಿನ್ನೆಲೆ ಸಹ ಇದೆ.

ಈಕೆಯ ಕೆಲವು ಶಂಕಾಸ್ಪದ, ಭಾರೀ ಮೊತ್ತದ, ಬ್ಯಾಂಕ್ ಹಣ ವರ್ಗಾವಣೆಗಳು... ಅಂದರೆ ಇವಳಿಂದ, ಸದ್ಯಕ್ಕೆ ಈಗ ದುಬೈನಲ್ಲಿರುವ ಇವಳ ಹಳೇ ರೌಡಿ ಕಸಿನ್ನಿಗೆ, ಅವನಿಂದ ಇಲ್ಲಿನ ಒಬ್ಬ ಸುಪಾರಿ ಕಿಲ್ಲರಿಗೆ, ಆ ನಂತರ ಅವನ ನಿಗೂಢ ಸಾವು. ಇದೆಲ್ಲದರ ತನಿಖೆ ಈಗ ತಾನೇ ಮುಗಿದಿದೆ, ಅದಕ್ಕೆ ಅದನ್ನ ಸ್ವಲ್ಪ ಸೂಕ್ಷ್ಮವಾಗಿ ನಡೆಸ್ತಾಯಿದ್ದೀವಿ'.

'ಓಕೆ. ಆದರೆ ಇಲ್ಲಿಯತನಕ ಶಂಕಿತ ಆರೋಪಿಗಳು ಯಾರ್ಯಾರು, ಅವರ ಪರಿಚಯ, ಹಿನ್ನೆಲೆ, ಅವರಿಗೆ ಕೊಲೆ ಮಾಡಲು ಇರಬಹುದಾದ ಕಾರಣ, ಇಷ್ಟು ಮಾತ್ರ ಆಯಿತು. ಆದರೆ ಈ ಆರೋಪಿಗಳು, ಅವರು ಕೊಲೆ ಮಾಡಿಲ್ಲ ಅನ್ನೋದಕ್ಕೆ ಕೊಟ್ಟಿರುವ ಸಮಜಾಯಿಷಿಗಳೇನು, ಅವುಗಳ ಸತ್ಯಾಸತ್ಯತೆ ಏನು ಅಂತ ನೋಡಿದ್ದೀರ? ಹೋಗಲಿ, ಈ ತನಿಖೆ ಮುಗಿದಿದೆ ಅಂದ್ರಲ್ಲ... ಹಾಗಾದರೆ ಈ ಕೊಲೆ ಮಾಡಿದ್ದು ಯಾರು ಹೇಳಿ?'

'ಸರ್, ಈ ಹಿಂದಿನ ಎರಡು ದಿನಗಳಲ್ಲಿ ನಾನು ಮಾಡಿದ್ದೆಲ್ಲಾ ಅದನ್ನೇ ಸರ್... ತನಿಖೆ ನೈಂಟಿನೈನ್ ಪರ್ಸೆಂಟ್ ಮುಗಿದಿದೆ. ಆದರೆ ನಾನು ಒಂದು ಅಂತಿಮ, ಅಲ್ಲಗಳೆಯಲಾಗದ, ನಿರ್ಣಾಯಕ ಸಾಕ್ಷಿಗಾಗಿ ಕಾಯ್ತಾಯಿದ್ದೀನಿ ಸರ್. ಅದು ಇನ್ನು ಅರ್ಧ ಗಂಟೇಲಿ ನನ್ನ ಕೈ ಸೇರುತ್ತೆ. ಬಹುಶಃ ನಾನು ಆಗ ಕೊಲೆಗಾರನನ್ನ ಘೋಷಣೆ ಮಾಡಬಹುದೇನೊ. ಈಗ ಊಟದ ಸಮಯ ಆಯ್ತು. ಎಲ್ಲಾ ಇಲ್ಲಿಗೇ ತರ್ಸಿದ್ದೀನಿ. ಮೊದಲು ಊಟ ಆಗಲಿ, ಆಮೇಲೆ ನೋಡೋಣ ಸರ್'.

'ಓಕೆ... ಹಾಗೇ ಆಗಲಿ'.

ಜಿಲ್ಲೆಯ ಪೊಲೀಸು ವರಿಷ್ಠಾಧಿಕಾರಿಗೆ ಕುತೂಹಲ ಜಗ್ಗಿ ಎಳೆಯುತ್ತಿದ್ದರೂ, ತೋರ್ಪಡಿಸದೆ ಸಂಯಮದ ಹೊದಿಕೆ ಹೊದ್ದು ಮೇಲೆದ್ದಿದ್ದ. ಸ್ಟೇಷನ್ನಿನ ಪೇದೆಗಳಿಗೆ, ಮಾಯಣ್ಣ ಮಾಯವಾಗಿದ್ದ ಕಳೆದೆರಡು ದಿನಗಳಲ್ಲಿ, ತಮ್ಮ ಗಮನಕ್ಕೆ ಬರದ ಹಾಗೆ, ತನಿಖೆ ಗುಪ್ತಗಾಮಿನಿಯಾಗಿ ಭರದಲ್ಲಿ ಹರಿದು ಗುರಿ ಮುಟ್ಟಿದೆ ಎಂಬ ಗುಮಾನಿ ಬಂದಿತ್ತು. ಎಲ್ಲರೂ ತಮ್ಮ ತಮ್ಮ ಕುತೂಹಲವನ್ನು ಒಳಗಿಟ್ಟುಕೊಂಡು ಊಟಕ್ಕೆದ್ದಿದ್ದರು.

ಊಟ ಮುಗಿಸಿ ಮತ್ತೆ ಮಾಯಣ್ಣನ ಕೋಣೆಗೆ ಎಲ್ಲರೂ ಸೇರಿಕೊಂಡಾಗ ಸಮಯ ಮಧ್ಯಾಹ್ನ ಎರಡಾಗಿತ್ತು.

'ಮಾಯಣ್ಣ ಶುರು ಮಾಡಿ'.

ಎಸ್.ಪಿ. ಸಾಹೇಬರು ಆರಂಭದ ಹಸಿರು ನಿಶಾನೆ ತೋರಿದ್ದರು.

'ಸರ್, ಮೊದಲಿಗೆ ಶಂಕಿತರ ಪಟ್ಟಿಯಿಂದ ನಿರಪರಾಧಿಗಳನ್ನೆಲ್ಲಾ ಸೋಸಿ ತೆಗೆದುಬಿಡೋಣ... ಐ ಮೀನ್ ಎಲಿಮಿನೇಷನ್ ಮೆಥಡ್. ಇಫ್ ಯು ಡೋಂಟ್ ಮೈಂಡ್'.

'ಓಕೆ, ಆಗಬಹುದು'.

'ಸರ್, ಮೊದಲಿಗೆ ಚಂದ್ರನ್... ಈತನ ರಕ್ಷಣೆಗೆ ಎರಡು ಸಂಗತಿಗಳಿವೆ. ಒಂದು, ಆತ ಹೇಳಬಹುದಾಗಿದ್ದ ಮುಖ್ಯವಾದ ಒಂದು ಸಂಗತಿಯನ್ನೇ ಹೇಳಿಲ್ಲ. ಆತ ಕೊಲೆಯಾದ ದಿನ ತಾನು ಉಳಿದುಕೊಂಡಿದ್ದ ಹೋಟೆಲಿನಿಂದ ಯಾವ ಆಟೋನಲ್ಲಿ ಅಮ್ಮು ಮನೆಯ ಹತ್ತಿರ ಬಂದಿದ್ದನೋ ಅದೇ ಆಟೋನಲ್ಲಿ ವಾಪಸ್ ಹೋಗಿದ್ದಾನೆ. ಕೊಲೆ ನಡೆದ ಜಾಗದ ಸುತ್ತ ಎಲ್ಲೂ ಸಿಸಿಟೀವಿ ಇಲ್ಲದಿರಬಹುದು, ಆದರೆ ಅಲ್ಲಿ ಹೋಟೆಲ್ ಹತ್ತಿರ ಇದೆ. ಆ ಫೂಟೇಜಿಂದ ಆ ಆಟೋನ ಟ್ರೇಸ್ ಮಾಡಿ ಆ ಡ್ರೈವರ್ ಅಬ್ಬಾಸ್‌ನ ವಿಚಾರಿಸಿದಾಗ ತಿಳಿಯಿತು, ಚಂದ್ರನ್ ಅಮ್ಮು ಮನೆ ರಸ್ತೆಯ ಮೂಲೆಯಲ್ಲಿ ಆಟೋ ಇಳಿದು ಎರಡು ಹೆಜ್ಜೆಯಿಟ್ಟು, ತಕ್ಷಣ ಮನಸ್ಸು ಬದಲಾಯಿಸಿದಂತೆ ಮತ್ತೆ ಅದೇ ಆಟೋ ಹತ್ತಿ ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಹೋಗಿದ್ದಾರೆ. ಅಲ್ಲಿನ ಸಿಸಿಟೀವಿನಲ್ಲೂ ಅದು ರೆಕಾರ್ಡ್ ಆಗಿದೆ.

ಆಟೋ ಹತ್ತಿ ಇಳಿದ ನಡುವಿನ ಸಮಯಾಂತರ ಕೂಡ ತಾಳೆ ಆಗುತ್ತೆ ಸರ್. ಎರಡು, ಆ ಹದಿನೈದು ಲಕ್ಷ ರೂಪಾಯಿ ಕಿತ್ತಳೆ ಗುತ್ತಿಗೆ ಹಣ, ಚಂದ್ರನ್ ಎಗರಿಸಿಲ್ಲ, ಅಮ್ಮು ಕೈಸೇರಿದೆ. ಅದನ್ನ ಅವರು ಎರಡು ಭಾಗ ಮಾಡಿ, ತಾನು ಕೊಲೆಯಾದ ಹಿಂದಿನ ದಿನ, ತನ್ನ ಮಲತಾಯಿಯ ಮಕ್ಕಳಿಬ್ಬರ ಹೆಸರಲ್ಲಿ ಭವಿಷ್ಯ ನಿಧಿ ಇನ್ಶೂರೆನ್ಸ್ ಮಾಡಿಸಿದ್ದಾರೆ, ಅದರ ರಶೀದಿ ನಿನ್ನೆ ತಾನೆ ಅವರ ಇಮೇಲ್‌ಗೆ ಬಂದಿದೆ ಸರ್. ಈ ಆರೋಪ ಮತ್ತು ವಿಚಾರಣೆ ಆತನನ್ನು ತುಂಬಾ ಗಾಸಿ ಮಾಡಿದೆ ಸರ್'.

(ಸಶೇಷ)